

45 ಹೆಣ್ಣುಮಕ್ಕಳು ಬಾಲ್ಯವಿವಾಹವಾದವರು! ಅಪ್ರಾಪ್ತ ಹೆಣ್ಣುಮಕ್ಕಳ ಮದುವೆಯನ್ನು ಸಮರ್ಪಕವಾಗಿ ನಿಯಂತ್ರಿಸದ ಸಮಾಜ ಮತ್ತು ಸರ್ಕಾರದ ಆಡಳಿತ ಯಂತ್ರದ ಗುರುತರ ಲೋಪದಿಂದ ಬಡ ಹೆಣ್ಣುಮಕ್ಕಳು 'ಅನಿವಾರ್ಯ'ವಾಗಿ ಮೈ ಮಾರಿಕೊಳ್ಳುವ ಸ್ಥಿತಿಗೆ ಬಂದಿರುವುದರ ಜವಾಬ್ದಾರಿಯನ್ನು ಹೊರುವವರ್‍ಯಾರು? 2017ರಲ್ಲಿ ನಮ್ಮ ಸರ್ವೋಚ್ಚ ನ್ಯಾಯಾಲಯ '18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣಿನ ಜೊತೆ ನಡೆಸುವ ಲೈಂಗಿಕ ಕ್ರಿಯೆಯನ್ನು ಮದುವೆಯಾಗಿದ್ದರೂ ಆಗದಿದ್ದರೂ ಅತ್ಯಾಚಾರ ಎಂದೇ ಪರಿಗಣಿಸಬೇಕು' ಎಂದು ತೀರ್ಪು ನೀಡಿ ಕಠಿಣ ಶಿಕ್ಷೆಗೆ ಆದೇಶಿಸಿದೆ. ಆದರೆ 2017ರ ಸರ್ಕಾರದ ಅಧ್ಯಯನ ವರದಿಯಂತೆ ಇಂದಿಗೂ ಭಾರತದಲ್ಲಿ ನಡೆಯುತ್ತಿರುವ ಶೇ. 29 ಹೆಣ್ಣುಮಕ್ಕಳ ಮದುವೆಗಳು ಬಾಲ್ಯವಿವಾಹಗಳೇ! ಎಂದರೆ ಈ ಪ್ರಮಾಣದ 'ಅತ್ಯಾಚಾರ'ವನ್ನು ಮದುವೆಯೆಂಬ ಒಪ್ಪಿತ ಮುದ್ರೆಯಡಿಯೇ ನಮ್ಮ ಬಾಲೆಯರು ಅನುಭವಿಸುತ್ತಿದ್ದಾರೆ!

ಹೆಣ್ಣುಮಕ್ಕಳ ಕಳ್ಳಸಾಗಾಣಿಕೆ ಇಂದು ಒಂದು ದೊಡ್ಡ ಮಾಫಿಯಾ ಆಗಿ ಬೆಳೆದಿದ್ದು, ಅದರಲ್ಲಿ ಕರ್ನಾಟಕ ಮೂರನೆಯ ದೊಡ್ಡ ರಾಜ್ಯವೆಂದು ದಾಖಲಾಗಿದೆ. ಆರೋಗ್ಯ ಇಲಾಖೆಯಡಿ ನೋಂದಾಯಿತರಾದ ಶೇ. 45.9ರಷ್ಟು ವೇಶ್ಯಾವಾಟಿಕೆಯ ಜಾಲದಲ್ಲಿ ಬಿದ್ದವರನ್ನು ಕದ್ದೊಯ್ದು ಈ ದಂಧೆಗೆ ನೂಕಲಾಗಿದೆ ಎಂಬ ಅಂಶವೇ ಹೆಣ್ಣುಮಕ್ಕಳಿಗೆ ನಮ್ಮ ರಾಜ್ಯ ಎಷ್ಟು ಅಸುರಕ್ಷಿತವಾಗಿದೆ ಎಂಬುದರ ಸೂಚನೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಕಣ್ಮರೆಯಾದ 16,367 ಬಾಲಕಿಯರಲ್ಲಿ 1499 ಬಾಲಕಿಯರು ಪತ್ತೆಯೇ ಆಗಿಲ್ಲ! ಇವು ದಾಖಲಾದ ಅಂಕಿಅಂಶಗಳಷ್ಟೇ. ಮರ್ಯಾದೆಗಂಜಿ ದಾಖಲಾಗದವುಗಳ ಸಂಖ್ಯೆ ಇದರ ಮೂರು–ನಾಲ್ಕು ಪಟ್ಟು ಹೆಚ್ಚಿರುವ ಸಾಧ್ಯತೆಯಿದೆ. ಇವರಲ್ಲಿ ಹೆಚ್ಚಿನವರು ವೇಶ್ಯಾವಾಟಿಕೆಗೆ ನೂಕಲಾದವರೆನ್ನುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಮೀರಜ್, ಮುಂಬೈ, ಬೆಂಗಳೂರು, ಸಾಂಗ್ಲಿ, ಪುಣೆ, ಗೋವಾ, ದೆಹಲಿ, ಹೈದ್ರಾಬಾದ್, ಕೋಲ್ಕತ್ತ... ಮುಂತಾದ ಬ್ರಾಥೆಲ್‌ಗಳಿಗೆ ಇವರನ್ನು ಹೆಚ್ಚಾಗಿ ಕದ್ದೊಯ್ದಿರುವುದು ಅಧ್ಯಯನದ ವೇಳೆ ತಿಳಿದು ಬಂದಿದೆ.

ಕಳ್ಳಸಾಗಾಣಿಕೆಯಿಂದ ಪಾರಾಗಿ ಬಂದ ಶೇ. 33.5 ಹೆಣ್ಣುಮಕ್ಕಳು ಕೂಡ ಸಾಮಾಜಿಕ ಕಳಂಕ ಹಾಗೂ ಸರ್ಕಾರದ ಅಸಮರ್ಪಕ ಪುನರ್ವಸತಿ ವ್ಯವಸ್ಥೆಯ ಕಾರಣಕ್ಕೆ ಮತ್ತೆ ದಂಧೆಗೇ ಬಿದ್ದಿರುವುದನ್ನೂ ಅಧ್ಯಯನ ವರದಿ ಸ್ಪಷ್ಟಪಡಿಸಿದೆ. ಅತ್ಯಾಚಾರಕ್ಕೊಳಗಾಗಿ ಬೀದಿಗೆ ಬೀಳುವ ಶೇ. 30 ಹೆಣ್ಣುಮಕ್ಕಳೂ ಇದೇ ಕಾರಣಕ್ಕೆ ವೇಶ್ಯಾವಾಟಿಕೆಗೆ ಸಿಲುಕುತ್ತಾರೆಂಬ ಅಂಶ, ನಿಜಕ್ಕೂ ಸರ್ಕಾರಗಳಿಗೆ ಮಾನವಿದ್ದರೆ, ನಾಚಿ ತಲೆ ತಗ್ಗಿಸಬೇಕಾದ ವಿಚಾರ. ಎಲ್ಲೆಡೆ ಮಾನವಹಕ್ಕುಗಳ ಬಗೆಗೆ ಗಂಟಲು ಹರಿಯುವಂತೆ ಬೊಬ್ಬೆ ಹೊಡೆಯಲಾಗುತ್ತಿದೆ! 'ಹೆಣ್ಣು' ಮತ್ತು 'ಮಕ್ಕಳು' ಈ ಹಕ್ಕುಗಳ ವ್ಯಾಪ್ತಿಯಲ್ಲಿ ಬರುವುದೇ ಇಲ್ಲವೇ? ಎಂದು ನಾವು ಸಂಕಟದಿಂದ ಗಟ್ಟಿಸಿ ಕೇಳಬೇಕಾಗಿದೆ.

ಜಾಗತಿಕವಾಗಿ ಮಕ್ಕಳ ಮಾರಾಟದಲ್ಲಿ ಭಾರತವು ಪ್ರಮುಖ ತಾಣವಾಗಿದೆಯೆಂದು ವಿಶ್ವಸಂಸ್ಥೆಯ ವರದಿ ಹೇಳುತ್ತದೆ. 90ರ ದಶಕದಿಂದ ಎಲ್ಲಾ ಸರ್ಕಾರಗಳು ಜಾರಿಗೊಳಿಸಿದ ಜಾಗತೀಕರಣದ ನೀತಿಗಳು ಹೆಣ್ಣುಮಕ್ಕಳ ಮಾರಾಟ ಅತಿ ಹೆಚ್ಚು ಬೆಳೆಯಲು ಕಾರಣವಾಗಿವೆ. ಅಂಕಿ ಸಂಖ್ಯೆಗಳನ್ನು ಗಮನಿಸಿದರೆ, ಪ್ರತಿ ಜಿಲ್ಲೆಯಲ್ಲಿ ಒಂದು ವರ್ಷಕ್ಕೆ ಸರಾಸರಿ 50–80 ಹೆಣ್ಣುಮಕ್ಕಳು ಕಾಣೆಯಾಗುತ್ತಿದ್ದಾರೆ. ಅದರಲ್ಲಿ ಅರ್ಧದಷ್ಟು ಹೆಣ್ಣುಮಕ್ಕಳು ಪೊಲೀಸ್ ಇಲಾಖೆಯ 'ಶಾಶ್ವತ ನಾಪತ್ತೆ'ಯೆಂಬ ಕಪ್ಪುಪಟ್ಟಿಯ ಕಡತದಲ್ಲಿ ದಾಖಲಾಗಿ ದೂಳು ಹಿಡಿಯುತ್ತಾರೆ! ಇದರಲ್ಲಿ ಶೇ. 70ರಷ್ಟು ಇನ್ನೂ ಬಾಲ್ಯದಾಟದವರು ಎನ್ನುವುದು ಅತ್ಯಂತ ಆತಂಕಕಾರಿ.

ನಾಪತ್ತೆಯಾದ ಹೆಣ್ಣುಮಕ್ಕಳು ವೇಶ್ಯಾವಾಟಿಕೆಯ ಅಡ್ಡಗಳಲ್ಲಿ ಸಿಕ್ಕಿದರೂ ಅದರ ಹಿಂದಿರುವ ವ್ಯವಸ್ಥಿತವಾದ ಅಕ್ರಮ ಹೆಣ್ಣುಮಕ್ಕಳ ಸಾಗಾಣಿಕಾ ಜಾಲವನ್ನು ಭೇದಿಸಲು ಪೊಲೀಸ್ ಇಲಾಖೆಗೆ ಏಕೆ ಸಾಧ್ಯವಾಗುತ್ತಿಲ್ಲ? ಎಲ್ಲವೂ ಗೊತ್ತಿದ್ದೂ ಹೆಣ್ಣುಮಕ್ಕಳನ್ನು ಹುಡುಕುವ, ರಕ್ಷಿಸುವ, ಮತ್ತೆ ಅವರನ್ನು ಯಥಾಸ್ಥಿತಿಯಲ್ಲಿ ಉಳಿಸುವ ಕಣ್ಣಾಮುಚ್ಚೆ ನಾಟಕವನ್ನು ವ್ಯವಸ್ಥೆ ಉದ್ದೇಶಪೂರ್ವಕವಾಗಿಯೇ ಆಡುತ್ತಿದೆಯೇ? ಇವೆಲ್ಲವೂ ಬಗೆಹರಿಯದ ಪ್ರಶ್ನೆಗಳಾಗಿಯೇ ಉಳಿದಿವೆ.

ಹೆಣ್ಣಿನ ದೇಹವನ್ನು ವಸ್ತುವನ್ನಾಗಿಸಿಕೊಂಡು ವ್ಯಾಪಾರದ ಆಟವಾಡುತ್ತಿರುವವರಿಗೆ ನಾಪತ್ತೆಯಾದ ಹೆಣ್ಣುಮಕ್ಕಳೇ ಬಂಡವಾಳ ಹೂಡಿಕೆಯಾಗಿ ಬಳಕೆಯಾಗುತ್ತಿದ್ದಾರೆ. ಅವರಿಂದ ಕೋಟಿಗಟ್ಟಲೆ ವಹಿವಾಟು ನಡೆಸಲಾಗುತ್ತಿದೆ. ನಿರ್ಲಜ್ಜ ವ್ಯವಸ್ಥೆಗೆ, ಪ್ರಭುತ್ವಕ್ಕೆ ಹೃದಯವಿದ್ದರೆ... ಇದು ಮನುಷ್ಯತ್ವದ ಕಟ್ಟಕಡೆಯ ಮಜಲು ಎಂದು ದ್ರವಿಸುವಂತೆ ಹೇಗೆ ಅರ್ಥಮಾಡಿಸುವುದು?

ಕರ್ನಾಟಕ ಸರ್ಕಾರ ನೇಮಿಸಿದ್ದ ಸಮಿತಿಯಿಂದ ನಾವು ಸಲ್ಲಿಸಿದ 'ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ವರದಿ–2017' ನಮ್ಮ ವ್ಯವಸ್ಥೆಯ ಇಂತಹ ಮುಚ್ಚಿಟ್ಟ ಭೀಕರ ಕ್ರೌರ್ಯದ ಸಾವಿರಾರು ಮುಖಗಳನ್ನು ಅನಾವರಣಗೊಳಿಸುತ್ತದೆ. ಈ ಹೆಣ್ಣುಮಕ್ಕಳು ದಮನಿತರಲ್ಲಿ ದಮನಿತರು ಎಂಬುದಕ್ಕೆ ವರದಿಯ ಪ್ರತಿ ಪುಟವೂ ಸಾಕ್ಷಿ ನೀಡುತ್ತದೆ! ಹೀಗಿದ್ದೂ ಪಂಚೇಂದ್ರಿಯಗಳನ್ನು ಕಳೆದುಕೊಂಡ ಸರ್ಕಾರ, ಜರ್ಜರಿತವಾಗಿ ಬಿಡುಗಡೆಗೆ ಹಾತೊರೆಯುತ್ತಿರುವ ಈ ಹೆಣ್ಣುಮಕ್ಕಳ ಚೀತ್ಕಾರವನ್ನು ಆಲಿಸಲಿಲ್ಲ. ಲೈಂಗಿಕ ಜೀತದ ನರಕಕ್ಕೆ ಅನಿವಾರ್ಯವಾಗಿ ಬಿದ್ದ ಸಾವಿರಾರು ಬಾಲೆಯರನ್ನಾದರೂ ಹೊರತೆಗೆಯಲು ತಕ್ಷಣವೇ ಕ್ರಮ ಕೈಗೊಳ್ಳಲಾರದಷ್ಟು ನಿರ್ಲಕ್ಷ್ಯ ನಿಜಕ್ಕೂ ಅಕ್ಷಮ್ಯ! ಈ ಅಧ್ಯಯನ ಸಮಿತಿಯ ಅಧ್ಯಕ್ಷರಾದ ಅಂದಿನ ಕಾಂಗ್ರೆಸ್ ಸರ್ಕಾರದ ವಿಧಾನಸಭಾ ಸದಸ್ಯರಾಗಿದ್ದ ಹಾಗೂ ಸಮ್ಮಿಶ್ರ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿದ್ದ ಜಯಮಾಲಾ ಅವರಿಗೂ ತಮ್ಮದೇ ಸರ್ಕಾರದ ಒತ್ತಡ ಹೇರಿ ಈ ದಮನಿತರ ಬಿಡುಗಡೆಗಾಗಿ ಪ್ರಯತ್ನಿಸುವುದು ಸಾಧ್ಯವಾಗಲಿಲ್ಲ.

ಮೊದಲೇ ನೊಂದ ಆ ಎಳೆಯ ಜೀವಗಳನ್ನು ಮತ್ತಷ್ಟು ನೋಯಿಸಿ, ಬೇಯಿಸುತ್ತಿರುವ ಪಾಪಪ್ರಜ್ಞೆ ಸಮಿತಿಯಲ್ಲಿ ಕೆಲಸ ಮಾಡಿದ ನನ್ನಂತಹವರದು. ಈ ಬಾಲೆಯರನ್ನು ಲೈಂಗಿಕಜೀತದಲ್ಲೇ ಮುಂದುವರೆಯುವಂತೆ ಮಾಡಿರುವ ಇವರ ಇಂತಹ ಸ್ಥಿತಿಗೆ ಯಾರನ್ನು ಶಿಕ್ಷಿಸೋಣ – 72 ವರ್ಷ ಕಳೆದಿರುವ ಸ್ವತಂತ್ರ ಭಾರತದಲ್ಲಿ ಬಡತನ, ನಿರಕ್ಷರತೆ, ನಿರುದ್ಯೋಗದಂತಹ ಕಿತ್ತು ತಿನ್ನುತ್ತಿರುವ ಸಮಸ್ಯೆಗಳನ್ನು ತಳಮಟ್ಟದಿಂದ ನಿರ್ಮೂಲನೆಗೊಳಿಸಲು ಅಸಮರ್ಥವಾದ ಸರ್ಕಾರಗಳನ್ನೇ? ಹೆಣ್ಣುಮಕ್ಕಳ ರಕ್ಷಣೆ, ಅವರ ಪುನರ್ವಸತಿ, ಯೋಗಕ್ಷೇಮ... ತಮಗಿದೆಲ್ಲ ಸಂಬಂಧವೇ ಇಲ್ಲದಂತೆ ತಣ್ಣಗಿರುವ ನಿರ್ಲಜ್ಜ ಆಡಳಿತಯಂತ್ರವನ್ನೇ? ತಮ್ಮ ಸುಖಕ್ಕಾಗಿ ಹೆಣ್ಣನ್ನು ಇಂತಹ ಲೈಂಗಿಕಜೀತಕ್ಕಿಳಿಸಿ ಅದರ 'ಯಥಾಸ್ಥಿತಿ' ಮುಂದುವರಿಕೆಯಿಂದ ಹೊಟ್ಟೆ ಹೊರೆದುಕೊಳ್ಳಲು ಸಜ್ಜುಗೊಂಡಿರುವ ದರಿದ್ರ ವ್ಯವಸ್ಥೆಯನ್ನೇ?

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in